# SILICON CITY COLLEGE

**K R PURAM, BENGALURU 36**

ACCREDITED BY NAAC

## Report on National Conference, March 2017

A One Day National Conference in Association with **NABARD** and **SIDBI** on **"Small and Medium Scale enterprises-Opportunities & Challenges in Digital India"** was held at Silicon City College campus on March 18th, 2017.

The Chief Guests and Key note speakers for the day Mr Anand Charan Sahu- SIDBI head, Mr B H Anil-Joint Secretary, MSME; Dr Muninarayanappa, ICBA co-ordinator; Dr H M Chandrashekar-Chairman of Silicon City Group of Institutions; Mr H M Mukunda-Director of Silicon City Group of Institutions; Dr Rose Kavitha-Director-Research, SCC, Mr Gnanesh-Principal, SCC and Mrs Adilakshmi-Principal, SCPUC released the proceedings of the conference.

Professors, Faculties and students from various colleges and institutions participated and presented the papers during the conference.



ವಿಜಯವಾಣಿ

ಗ್ರಾಮೀಣ ಅಭಿವೃದ್ಧಿಗೆ ನೆರವು ಅಗತ್ಯ

ಡಾ.ಎಚ್.ಎಂ. ಚಂದ್ರಶೇಖರ್ ಅಭಿಮತ >> ಸಿಲಿಕಾನ್ ಸಿಟಿ ಕಾಲೇಜಿನಲ್ಲಿ ವಿಚಾರ ಸಂಕಿರಣ



ಆರ್ಥಿಕ ಸದೃಢತೆಗೆ ಬ್ಯಾಂಕ್‌ಗಳ ಪಾತ್ರ ಮಹತ್ವದ್ದು: ಚಂದ್ರಶೇಖರ್



ವಾರ್ತಾ ಭಾರತಿ

ಗ್ರಾಮೀಣ ಜನತೆಗೂ ತಂತ್ರಜ್ಞಾನ ತಲುಪಲಿ

ಡಾ.ಚಂದ್ರಶೇಖರ್



ಸಣ್ಣ-ಮಧ್ಯಮ ಕೈಗಾರಿಕೆಗಳಿಗೆ ಉತ್ತೇಜನ ಅಗತ್ಯ

కర్ణాటక | సోమవారం |
మార్చి | 20 | 2017

సాక్షి

## చిన్న, మధ్యతరహా పరిశ్రమలకు చేయూత ఇవ్వాలి



సావనీర్ విడుదల చేస్తున్న సిలికాన్ సిటీ కళాశాల అధ్యక్షుడు హెచ్.ఎం.చంద్రశేఖర్, ఇతర ప్రముఖులు

కృష్ణరాజపురం : భారత ఆర్థిక వ్యవస్థను బలోపేతం చేయడంలో కీలక పాత్ర పోషిస్తున్న చిన్న, మధ్యతరహా పరిశ్రమలకు బ్యాంకులు, సంఘాలు సహాయసహకారాలు అందించాలని సిలికాన్ సిటీ కాలేజీ అధ్యక్షుడు హెచ్.ఎం.చంద్రశేఖర్ సూచించారు. చిన్న, మధ్యతరహా పరిశ్రమలు ఎదుర్కొంటున్న సవాళ్లు, అవకాశాలపై నబార్డ్, ఎస్ఐడీబీ ఆధ్వర్యంలో ఆదివారం సిలికాన్ సిటీ కాలేజీలో ఏర్పాటు చేసిన జాతీయస్థాయి చర్చ సమావేశంలో ఆయన పాల్గొన్నారు. అంతకుముందు సావనీర్ విడుదల చేశారు. ఎంఎస్ఎంఈ జాయింట్ డైరెక్టర్ అనిల్, ఎస్ఐడీబీ బ్యాంకు ముఖ్య వ్యవస్థాపకురాలు ఆనంది చరణ్ సాహు పాల్గొన్నారు.

ఉచిత వైద్య శిబిరాలను

## ಗ್ರಾಮೀಣ ಜನರ ಅಭಿವೃದ್ಧಿಗೆ ಸಂಘ-ಸಂಸ್ಥೆ ಮುಂದೆ ಬರಲಿ

ಕೆಆರ್‌ಪುರ, ಮಾ.18- ಗ್ರಾಮೀಣ ಜನರ ಅಭಿವೃದ್ಧಿಗೆ ಎಲ್ಲಾ ಸಂಘ ಸಂಸ್ಥೆಗಳು ಮುಂದೆ ಬರಬೇಕು ಎಂದು ಸಿಲಿಕಾನ್ ಸಿಟಿ ಕಾಲೇಜಿನ ಅಧ್ಯಕ್ಷ ಡಾ.ಹೆಚ್.ಎಂ.ಚಂದ್ರಶೇಖರ್ ಇಂದಿಲ್ಲಿ ತಿಳಿಸಿದರು.



ಕೆಆರ್‌ಪುರದ ಸಿಲಿಕಾನ್ ಸಿಟಿ ಕಾಲೇಜಿನಲ್ಲಿ ನಬಾರ್ಡ್ ಹಾಗೂ ಸಿಡ್ಬಿ ಬ್ಯಾಂಕುಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ನಗರ ಹಾಗೂ ಗ್ರಾಮಾಂತರ ಪ್ರದೇಶಗಳಿಗೆ ಹೋಲಿಸಿಕೊಂಡರೆ ವ್ಯತ್ಯಾಸಗಳು ಸಾಕಷ್ಟು ಕಂಡು ಬರುತ್ತವೆ. ಈ ವ್ಯತ್ಯಾಸಗಳು ಇಲ್ಲದಂತೆ ಮಾಡಲು ನಗರದಂತೆ ಗ್ರಾಮೀಣ ಅಭಿವೃದ್ಧಿಯಾಗಬೇಕಿದೆ ಎಂದು ಹೇಳಿದರು.

ಗ್ರಾಮೀಣ ಜನತೆಯ ಅಭಿವೃದ್ಧಿಗೆ ಮುಂದೆ ಬಂದಿರುವ ಇಂತಹ ಬ್ಯಾಂಕುಗಳ ಸಹಾಯ ಪಡೆದುಕೊಂಡು, ಗ್ರಾಮೀಣ ಭಾಗದ ಜನತೆಗೆ ಪ್ರಸ್ತುತ ಇರುವ ತಂತ್ರಜ್ಞಾನಗಳ ಬಗ್ಗೆ ಜನರಿಗೆ ಅರಿವು ಮೂಡಿಸಬೇಕು. ಆನ್‌ಲೈನ್ ಬ್ಯಾಂಕಿಂಗ್ ಬಗ್ಗೆ ಸಾರ್ವಜನಿಕರು ಹೆಚ್ಚಾಗಿ ತಿಳಿದುಕೊಳ್ಳಬೇಕು ಎಂದು ಹೇಳಿದರು.

ಬೆಂಗಳೂರು ವಿವಿ ಪ್ರೊ. ಮುನಿ ನಾರಾಯಣಪ್ಪ ಮಾತನಾಡಿ, ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳು ಈ ಬಗ್ಗೆ ಹೆಚ್ಚು ಕಾಳಜಿ ವಹಿಸಿ ಗ್ರಾಮೀಣ ಜನತೆಯ ಜೀವನ ಮಟ್ಟವನ್ನು ಉತ್ತಮವಾಗಿ ಮಾಡಬೇಕಿದೆ ಎಂದು ತಿಳಿಸಿದರು.

ಸಿಡ್ಬಿ ಬ್ಯಾಂಕ್‌ನ ಜನರಲ್ ಮ್ಯಾನೇಜರ್ ಅನದಿ ಚರಣ್ ಸಾಹು ಮಾತನಾಡಿ, ಪ್ರಧಾನ ಮಂತ್ರಿ ಮುದ್ರಾ ಯೋಜನೆಯಿಂದ ಗ್ರಾಮೀಣ ಭಾಗಗಳಲ್ಲಿ ಜನರು ಸ್ವಾವಲಂಬಿ ಜೀವನ ನಡೆಸುಂತಾಗಿದೆ. ಈ ಯೋಜನೆಯಿಂದ ಐವತ್ತು ಸಾವಿರದಿಂದ 10 ಲಕ್ಷ ವರೆಗೂ ಹಣದ ಸಹಾಯ ನೀಡಲಾಗುತ್ತದೆ ಎಂದು ಹೇಳಿದರು.

ದೇಶದ ವಿವಿಧೆಡೆಯಿಂದ ವಿದ್ಯಾರ್ಥಿಗಳು, ಉಪನ್ಯಾಸಕರು ಸೇರಿದಂತೆ ಹಲವಾರು ಮಂದಿ ವಿಚಾರ ಸಂಕಿರಣದಲ್ಲಿ ಭಾಗವಹಿಸಿ ತಮ್ಮ ವಿಚಾರಗಳನ್ನು ಮಂಡಿಸಿದರು.

ಮಾಡರೇಟರ್ ಎ.ರವಿ, ಸಿಲಿಕಾನ್ ಸಿಟಿ ಕಾಲೇಜಿನ ಪ್ರಾಂಶುಪಾಲ ಜ್ಞಾನೇಶ್, ರಿಸರ್ಚ್ ಡೈರೆಕ್ಟರ್ ಡಾ.ರೋಸ್ ಕವಿತ, ಪಿಯು ಪ್ರಾಂಶುಪಾಲೆ ಪ್ರೊ. ಆದಿಲಕ್ಷ್ಮಿ, ಡಾ.ರಮೇಶ್, ಡಾ.ವೆಂಕಟೇಶ್ ಪಾಲ್ಗೊಂಡಿದ್ದರು.

Sat, 18 March 2017
epaper.eesanje.com//c/17626879

## ಗ್ರಾಮೀಣರ ಅಭಿವೃದ್ಧಿಗೆ ಸಂಘ ಸಂಸ್ಥೆಗಳು ಮುಂದಾಗಲಿ: ಡಾ. ಹೆಚ್.ಎಂ. ಚಂದ್ರಶೇಖರ್

**ಕೆ.ಆರ್.ಪುರ:** ಗ್ರಾಮೀಣ ಜನರ ಅಭಿವೃದ್ಧಿಗೆ ಎಲ್ಲಾ ಸಂಘ ಸಂಸ್ಥೆಗಳು ಮುಂದೆ ಬರಬೇಕು ಎಂದು ಸಿಲಿಕಾನ್ ಸಿಟಿ ಕಾಲೇಜಿನ ಅಧ್ಯಕ್ಷ ಡಾ. ಹೆಚ್.ಎಂ. ಚಂದ್ರಶೇಖರ್ ತಿಳಿಸಿದರು.



ಕೆ.ಆರ್.ಪುರದ ಸಿಲಿಕಾನ್ ಸಿಟಿ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಭಾಗಿಯಾಗಿದ್ದ ಗಣ್ಯರು.

ಕೆ.ಆರ್.ಪುರದ ಸಿಲಿಕಾನ್ ಸಿಟಿ ಕಾಲೇಜಿನಲ್ಲಿ ನಬಾರ್ಡ್ ಹಾಗೂ ಸಿಡ್ಬಿ ಬ್ಯಾಂಕುಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ನಗರ ಹಾಗೂ ಗ್ರಾಮಾಂತರ ಪ್ರದೇಶಗಳಿಗೆ ಹೋಲಿಸಿಕೊಂಡರೆ ವ್ಯತ್ಯಾಸಗಳು ಸಾಕಷ್ಟು ಕಂಡು ಬರುತ್ತವೆ. ಈ ವ್ಯತ್ಯಾಸಗಳು ಇಲ್ಲದಂತೆ ಮಾಡಲು ನಗರದಂತೆ ಗ್ರಾಮೀಣ ಅಭಿವೃದ್ಧಿಯಾಗಬೇಕಿದೆ ಎಂದು ಹೇಳಿದರು.

ಗ್ರಾಮೀಣ ಜನತೆಯ ಅಭಿವೃದ್ಧಿಗೆ ಮುಂದೆ ಬಂದಿರುವ ಇಂತಹ ಬ್ಯಾಂಕುಗಳ ಸಹಾಯ ಪಡೆದುಕೊಂಡು ಗ್ರಾಮೀಣ ಭಾಗದ ಜನತೆಗೆ ಪ್ರಸ್ತುತ ಇರುವ ತಂತ್ರಜ್ಞಾನಗಳ ಬಗ್ಗೆ ಜನರಿಗೆ ಅರಿವು ಮೂಡಿಸಬೇಕು. ಸಮಾಜದ ಕಟ್ಟಕಡೆಯ ವ್ಯಕ್ತಿಯೂ ಸಮಾಜದಲ್ಲಿ ದೊರೆಯುವ ಸೌಲಭ್ಯ ಪಡೆದುಕೊಳ್ಳುವಂತೆ ಮಾಡಬೇಕು ಎಂದರು.

ನಗರ ಹಾಗೂ ಗ್ರಾಮೀಣ ಆರ್ಥಿಕತೆ ವ್ಯತ್ಯಾಸ ಹೋಗಲಾಡಿಸುವುದು ಇಂದಿನ ಯುವ ಜನಾಂಗದಿಂದ ಮಾತ್ರ ಸಾಧ್ಯ ಎಂದು ಹೇಳಿದರು.

ಬೆಂಗಳೂರು ವಿವಿ ಪ್ರೊ. ಮುನಿನಾರಾಯಣಪ್ಪ ಮಾತನಾಡಿ, ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳು ಈ ಬಗ್ಗೆ ಹೆಚ್ಚು ಕಾಳಜಿ ವಹಿಸಿ ಗ್ರಾಮೀಣ ಜನತೆಯ ಜೀವನ ಮಟ್ಟವನ್ನು ಉತ್ತಮವಾಗಿ ಮಾಡಬೇಕಿದೆ ಎಂದು ತಿಳಿಸಿದರು. ಸಿಡ್ಬಿ ಬ್ಯಾಂಕ್‌ನ ಜನರಲ್ ಮ್ಯಾನೇಜರ್ ಅನಡಿಚರಣ್ ಸಾಹು ಮಾತನಾಡಿ, ಪ್ರಧಾನಮಂತ್ರಿ ಮುದ್ರಾ ಯೋಜನೆಯಿಂದ ಗ್ರಾಮೀಣ ಭಾಗಗಳಲ್ಲಿ ಜನರು ಸ್ವಾವಲಂಬಿ ಜೀವನ ನಡೆಸುಂತಾಗಿದೆ. ಈ ಯೋಜನೆಯಿಂದ ಐವತ್ತು ಸಾವಿರದಿಂದ 10 ಲಕ್ಷದವರೆಗೂ ಹಣದ ಸಹಾಯ ನೀಡಲಾಗುತ್ತದೆ ಎಂದು ಹೇಳಿದರು.

ದೇಶದ ವಿವಿಧೆಡೆಯಿಂದ ಪ್ರಾಧ್ಯಾಪಕರು, ಉಪನ್ಯಾಸಕರು, ವಿದ್ಯಾರ್ಥಿಗಳು ಸೇರಿದಂತೆ ಹಲವಾರು ಮಂದಿ ವಿಚಾರ ಸಂಕಿರಣದಲ್ಲಿ ಭಾಗವಹಿಸಿ ತಮ್ಮ ವಿಚಾರಗಳನ್ನು ಮಂಡಿಸಿದರು.

ಇದೇ ಸಂದರ್ಭದಲ್ಲಿ 'ಭಾರತದಲ್ಲಿ ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ವಲಯದ ಸವಾಲುಗಳು ಮತ್ತು ಸದಾವಕಾಶಗಳು' ಎಂಬ ವಿಷಯಕ್ಕೆ ಸಂಬಂಧಿಸಿದಂತೆ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ ಲೇಖನಗಳ ಸಂಕಲನದ ಸಂಚಿಕೆಯನ್ನು ಬಿಡುಗಡೆಗೊಳಿಸಲಾಯಿತು. ಮಾಡರೇಟರ್ ಎ. ರವಿ, ಸಿಲಿಕಾನ್ ಸಿಟಿ ಕಾಲೇಜಿನ ಪ್ರಾಂಶುಪಾಲ ಜ್ಞಾನೇಶ್, ರಿಸರ್ಚ್ ಡೈರೆಕ್ಟರ್ ಡಾ. ರೋಸ್ ಕವಿತ, ಪಿಯು ಪ್ರಾಂಶುಪಾಲೆ ಪ್ರೊ. ಆದಿಲಕ್ಷ್ಮಿ, ಡಾ. ರಮೇಶ್, ಡಾ. ವೆಂಕಟೇಶ್ ಮತ್ತಿತರರು ಪಾಲ್ಗೊಂಡಿದ್ದರು.

**Sakshat Suddi 20-3-17**